





**‘ಯುದ್ಧ ಬೇಡ ಶಾಂತಿ ಬೇಕು’ ಎಂದು ಜಗತ್ತಿನ ಜೀವ ಪ್ರೇಮಿಗಳಿಗೆ ಶಾಂತಿ ಮತ್ತು ಅಹಿಂಸೆಯನ್ನು ಬಯಸಿದ ಅಶೋಕ ಚಕ್ರವರ್ತಿ ಮೊಮ್ಮಗ ಸಂಪ್ರತಿ ಮಹಾರಾಜ ಸ್ಮರಣೆಯ ಆಧುನಿಕ ವಸ್ತುಸಂಗ್ರಹಾಲಯ ಜಗತ್ತಿನ ಗಮನಸೆಳೆಯಲಿದೆ.**

ನೀಡುತ್ತದೆ. ಅನೇಕ ಧಾರ್ಮಿಕ ಮಹಾಪುರುಷರ ಕಲಾಕೃತಿಯನ್ನು ಇಲ್ಲಿ ಪ್ರತಿಷ್ಠಾಪಿಸಲಾಗಿದೆ.

ಸಂಪ್ರತಿ ತನ್ನ ಆಡಳಿತದ ಅವಧಿಯಲ್ಲಿ ಸಾವಿರಾರು ಜೈನ ಮಂದಿರಗಳನ್ನು ದೇಶವ್ಯಾಪಿ ಕಟ್ಟಿಸಿದ್ದ ಎನ್ನಲಾಗುತ್ತದೆ. ಆತನ ಸ್ಮರಣೆಗಾಗಿ ನೂತನ ವಸ್ತುಸಂಗ್ರಹಾಲಯ ಆ ಹೆಸರನ್ನೆ ಹೊತ್ತಿದೆ. ಅವನ ಆಡಳಿತದಲ್ಲಿಯೇ ಜೈನ ಧರ್ಮ ಕರ್ನಾಟಕದ ಕಡೆಯೂ ವಿಸ್ತರಣೆ ಆಯಿತು ಎನ್ನುತ್ತದೆ ಇತಿಹಾಸ.

## ಅಶೋಕ ಮತ್ತು ಸಂಪ್ರತಿ

ಮೌರ್ಯ ಸಾಮ್ರಾಟ ಅಶೋಕ ಚಕ್ರವರ್ತಿಗೆ ಕಳಿಂಗ ಯುದ್ಧದ ಗೆಲುವು ನಿರರ್ಥಕ ಭಾವವನ್ನು ಮೂಡಿಸಿತು. ಅಹಿಂಸೆ ಮತ್ತು ಸತ್ಯದ ಪ್ರಸಾರಕ್ಕಾಗಿ ತನ್ನ ಆಯುಷ್ಯವನ್ನು ಅರ್ಪಿಸುವ ನಿರ್ಧಾರವನ್ನು ಆತ ಪ್ರಕಟಿಸಿದ. ಅಂದರೆ ಅಲ್ಲಿನ ಭೀಕರ ಸಾವು ನೋವಿನ ದೃಶ್ಯ ಕಂಡು ಆತನ ಮನಸ್ಸು ಕರಗುತ್ತದೆ. ನಂತರ ಯುದ್ಧವೇ ಬೇಡ ಶಾಂತಿ ಬೇಕೆಂಬ ನಿಲುವು ತಾಳಿ ಬೌದ್ಧ ಧರ್ಮ ಪ್ರಸಾರಕ್ಕೆ ನಿಲ್ಲುತ್ತಾನೆ. ತನ್ನ ಮಗ–ಮಗಳನ್ನು ಪೂರ್ಣಾವಧಿ ಧರ್ಮ ಪ್ರಸಾರಕ್ಕೆ ನಿಯೋಜಿಸುತ್ತಾನೆ ಎನ್ನುವುದು ಇತಿಹಾಸ.

ಬಿಂದುಸಾರನ ಎರಡನೇ ಮಗ ಅಶೋಕ, ಚಂದ್ರಗುಪ್ತ ಮೌರ್ಯನ ಮೊಮ್ಮಗ. ಈತ ಕ್ರಿ.ಪೂ. 269ರಲ್ಲಿ ಪಟ್ಟಕ್ಕೆ ಬರುತ್ತಾನೆ. ಆತನಿಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಬೇಕು ಎನ್ನುವ ಹಂಬಲ ಇರುತ್ತದೆ. ದಿಗ್ವಿಜಯಗಳ ಮೂಲಕ ಮೌರ್ಯರ ಅಧಿಪತ್ಯವನ್ನು ವಿಸ್ತರಿಸುವ ಪ್ರಯತ್ನ ಮಾಡಿದ. ಅಂತಹ ಮಹತ್ವಾಕಾಂಕ್ಷೆಯ ರಾಜ ಅಶೋಕ ಏಕೈಕ ದಿಗ್ವಿಜಯವನ್ನು ಕೈಗೊಂಡ. ಅವನ ಪಾಲಿಗೆ ಕಳಿಂಗಯುದ್ಧವೇ ಮೊದಲ ಮತ್ತು ಕೊನೆಯ ಯುದ್ಧವಾಯಿತು. ಆತನಲ್ಲಿ ಅದು ಉಂಟು ಮಾಡಿದ ಪರಿಣಾಮ ಜಗತ್ತಿನ ಎಲ್ಲ ಯುದ್ಧದಾಹಿಗಳಿಗೂ ಪಾಠದಂತೆ ಭಾಸವಾಗುತ್ತದೆ. ಕಳಿಂಗ ಇಂದಿನ ಒಡಿಶಾ ಪ್ರಾಂತ್ಯ. ಆಗ ಅದನ್ನು ಶುದ್ಧವರ್ಮ ಆಳುತ್ತಿದ್ದ. ಅಶೋಕ ಅಂದು ಸಾರಿದ ಯುದ್ಧಕ್ಕೆ ರಾಜ್ಯ ವಿಸ್ತಾರದ ಹೊರತು ಬೇರೆ ಕಾರಣ ತಿಳಿದಿಲ್ಲ. ಆತನೇ ‘ದೇವನಾಂಪ್ರಿಯ’ ಎನ್ನುವ ಬಿರುದಿಗೂ ಪಾತ್ರನಾಗುತ್ತಾನೆ ಎನ್ನುವುದೇ ಮಹತ್ವದ ಸಂಗತಿ.

ಕಳಿಂಗದ ವಿಜಯದಲ್ಲಿ ಕಂಡ ಸಾವು ನೋವು ಅಶೋಕ ಮಹಾಶಯನಿಗೆ ಮಾನವೀಯ ಕಣ್ಣುತೆರೆಸಿದೆ. ಅಲ್ಲಿನ ಸಾವು ನೋವು, ಭೀಭತ್ಸ ದೃಶ್ಯ ಆತನಲ್ಲಿ ರಾಜ್ಯ ವಿಸ್ತರಣೆಯ ಮೋಹವನ್ನು ಮಂಜಿನಂತೆ ಕರಗಿಸಿದೆ. ಯುದ್ಧ ಎನ್ನುವುದು ಪ್ರಜಾಪೀಡನೆಯೇ ಹೊರತು ಪ್ರಜಾ ಪಾಲನೆಯಲ್ಲ ಎಂದು ಬೌದ್ಧ ಧರ್ಮ ಪ್ರಸರಣಕ್ಕೆ ಮುಂದಾಗುತ್ತಾನೆ. ನಂತರ ಕಪಿಲವಸ್ತು, ಲುಂಬಿಣಿ, ಸಾರನಾಥ, ಗಯಾ, ಕುಶಿನಗರದಲ್ಲಿ ಅನೇಕ ಬೌದ್ಧ ಸ್ತೂಪ ಮತ್ತು ವಿಹಾರಗಳನ್ನು ಸ್ಥಾಪಿಸಿದನು. ಮಕ್ಕಳಾದ ಸಂಗಮಿತ್ರೆ ಹಾಗೂ ಮಹೇಂದ್ರ (ಮಹಿಂದ)’ರನ್ನು ಶ್ರೀಲಂಕಾಕ್ಕೆ ಬೌದ್ಧ ಧರ್ಮ ಪ್ರಚಾರಕ್ಕಾಗಿ ಕಳುಹಿಸಿದನು. ಸಿಂಹಳದ ರಾಜ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ದೇವಿಯ ಮಗ ಮಹೇಂದ್ರಗೆ ಲೌಕಿಕ ಬದುಕಿನ ಮೋಹ ಇರಲಿಲ್ಲ. ಆತ ತಂದೆಯಂತೆ ಧರ್ಮಪ್ರಸರಣಾ ಕಾರ್ಯದಲ್ಲಿ ತೊಡಗಿದ. ಅವನ ಸಹೋದರಿ ಸಂಘಮಿತ್ರೆ ಕೂಡ ಅದೇ ಮಾರ್ಗದಲ್ಲಿ ಸಾಗಿದಳು. ಆದರೆ ತನ್ನ ವಂಶ ವೃಕ್ಷದ ಮತ್ತೊಂದು ಟಿಸಿಲು ಜೈನ ಧರ್ಮವನ್ನು ಪಾಲಿಸುತ್ತಿತ್ತು ಎನ್ನುವ ಸಂಗತಿ ಮತ್ತೊಂದು ವಿಶೇಷ.

‘ಅಶೋಕನ ಒಬ್ಬ ಮಗ ಜಲೌಕ ಕಾಶ್ಮೀರವನ್ನು ಸ್ವತಂತ್ರವಾಗಿ ಆಳಿದರೆ ಮತ್ತೊಬ್ಬ ಮಗ ಕುಣಾಲ ಪಾಟಲಿಪುತ್ರವನ್ನು ಆಳಿದ. ಕುಣಾಲ ಅಶೋಕನ ನಾಲ್ಕನೇ ಪತ್ನಿ ಪದ್ಮಾವತಿಯ ಮಗ. ಆ ಕುಣಲನಿಗೆ ದಶರಥ ಮತ್ತು ಸಂಪತಿ ಎಂಬ ಮಕ್ಕಳಿದ್ದರು. ಸಂಪತಿ ತನ್ನ ತಾತನಾದ ಅಶೋಕನ ಮಾರ್ಗವನ್ನು ಪಾಲಿಸಲಿಲ್ಲ. ಸಂಪತಿ ಜೈನ ಧರ್ಮ ಅನುಯಾಯಿಯಾದ. ಅವನ ಕಾಲದ ನಂತರ ಮೌರ್ಯ ಸಾಮ್ರಾಜ್ಯ ಒಡೆದು ಹೋಯಿತು. ಅಶೋಕನಿಗೆ ಅಸಂಧಿಮಿತ್ರ, ದೇವಿ, ತಿಸ್ಸರಕ್ಷ, ಪದ್ಮಾವತಿ, ಕಾರುವಾಕಿ ಎಂಬ ಐವರು ಪತ್ನಿಯರಿದ್ದರು’ ಎಂಬ ವಿವರವನ್ನು ಚಂದ್ರಪ್ಪ ಸಿ. ‘ಅಶೋಕ: ಸತ್ಯ–ಅಹಿಂಸೆಯ ಮಹಾಶಯ’ ಕೃತಿಯಲ್ಲಿ ನೀಡಿದ್ದಾರೆ. ■